# ಗಿಡಗಳಿರಲವ್ವ ಮನೆತುಂಬ!

## ಇಂಟೀರಿಯರ್ ಗಾರ್ಡನ್ ಮಾಡೋದು ಹೇಗೆ?

ಸಹಜವಾಗಿ ಇದ್ದ ಕಾಡುಗಳನ್ನು ಕಡಿದು ನಗರ ಕಟ್ಟಿಕೊಳ್ಳುತ್ತಿರುವ ಮನುಷ್ಯ, ಕಾಂಕ್ರೀಟ್ ಕಟ್ಟಡದೊಳಗೆ ಹಸಿರು ಬೆಳೆಸಲು ಹಂಬಲಿಸುತ್ತಾನೆ. 'ಹೋಮ್ ಗಾರ್ಡನಿಂಗ್' ಇಂದು ಬಹು ಜನಪ್ರಿಯ ಹವ್ಯಾಸ. ಮನೆಯೊಳಗೆ ಹಸಿರುಲೋಕವನ್ನು ಸೃಷ್ಟಿಸುವ, ಮನಸೊಳಗೆ ಚೈತನ್ಯಶೀಲತೆಯನ್ನು ಸೃಜಿಸುವ ಈ ಹವ್ಯಾಸಕ್ಕೆ ಹಲವು ಆಯಾಮಗಳಿವೆ. ಸೌಂದರ್ಯಕ್ಕೆ ಮಾತ್ರವಲ್ಲದೆ ಆರೋಗ್ಯಕ್ಕೂ ಉಪಕಾರಿಯಾದ ಒಳಾಂಗಣ ಸಸ್ಯಗಳ ಬಳಕೆ ಹೇಗೆ, ಆಯ್ಕೆ ಆರೈಕೆ ಹೇಗೆ, ನೀರು-ಬೆಳಕಿಗೆ ಅನುಗುಣವಾಗಿ ಯಾವ ಸ್ಥಳಕ್ಕೆ ಯಾವ ಸಸ್ಯ ಸೂಕ್ತ ಎಂಬ ಬಗ್ಗೆ ಸಂಕ್ಷಿಪ್ತವಾದ ಪರಿಚಯ ನೀಡುವುದು ಈ ಲೇಖನದ ಉದ್ದೇಶ. ಮನೆಯೊಳಗನ್ನು ಗಿಡಗಳಿಂದ ಅಲಂಕರಿಸಿ ಮನಸೊಳಗೆ ಖುಷಿಯ ಉದ್ಯಾನವನ್ನು ಬೆಳೆಸುವ ಬಯಕೆಯ ಬಳ್ಳಿಗೆ ಈ ಲೇಖನದಲ್ಲಿ ಬೆಳಕಿನ ಜೊತೆಗೆ ಗೊಬ್ಬರ-ನೀರು ಎರಡೂ ಸಿಗುತ್ತದೆ.

■ ಸೀಮಾ ಹೆಗಡೆ

